**<u>ದಿನಾಂಕಃ 10.03.2025 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ನನಗೆ ಮತ್ತು ಪ್ರತಿವಾದಿಗೆ ಯಾವುದೇ ವ್ಯವಹಾರಗಳು ಇರಲಿಲ್ಲ. ನನ್ನ ಗಂಡ ಪ್ರತಿವಾದಿಗೆ ನೋಟೀಸ್ ನೀಡಿದ ನಂತರ ಕ್ರಯದ ಕರಾರಿನ ಬಗ್ಗೆ ಪ್ರತಿವಾದಿಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅದಕ್ಕಿಂತ ಮುಂಚೆ ಕ್ರಯದ ಕರಾರಿನ ಬಗ್ಗೆ ಪ್ರತಿವಾದಿಗೆ ಮಾಹಿತಿ ಇತ್ತು ಎಂದು ಹೇಳುತ್ತಾರೆ. ಪ್ರತಿವಾದಿ ತನಗೆ ನೋಟೀಸ್ ಬಂದ ನಂತರ ನಮ್ಮ ಮನೆಗೆ ಬಂದು ನಮಗೆ ಪ್ರಶ್ನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ನನ್ನ ಗಂಡನ ಮಧ್ಯೆ ಮಾತಿನ ಚಕಮಕಿ ನಡೆದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಗಂಡನಿಗೆ ಕ್ರಯದ ಕರಾರು ಪತ್ರ ರದ್ದು ಮಾಡಿಕೊಳ್ಳದಿದ್ದರೆ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವುದಾಗಿ ನನ್ನ ಮುಂದೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಮನೆಯ ಅಕ್ಕ ಪಕ್ಕದವರು ಬಂದು ನಮಗೆ ಸದರಿ ವಿಚಾರ ನಮ್ಮ ಮನೆಯಲ್ಲಿ ಬಗೆಹರಿಸಿಕೊಳ್ಳುವಂತೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಪ್ರತಿವಾದಿಗೆ ನಿಪಿಃ 4 ಅನ್ನು ಸಾಲದ ಭದ್ರತೆಗಾಗಿ ಪ್ರತಿವಾದಿಗೆ ತಿಳಿಸದೇ ಬರೆದುಕೊಂಡಿರುತ್ತೇವೆಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಮತ್ತು ದಾವಾ ಸ್ವತ್ತನ್ನು ನಮ್ಮ ಹೆಸರಿಗೆ ಬರೆದುಕೊಳ್ಳಲು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಪ್ರಶ್ನೆಃ** 2019 ರಲ್ಲಿ ನೀವು ನಿಮ್ಮ ಮನೆಯ ಒಂದು ಭಾಗ ಮಾರಾಟ ಮಾಡಿದ್ದೀರಾ?

**ಉತ್ತರಃ** ಅದಕ್ಕೆ ಮತ್ತು ಈ ದಾವೆಗೆ ಯಾವುದೇ ಸಂಬಂಧ ಇಲ್ಲ.

2019 ರಲ್ಲಿ ನಾವು ಮಾರಾಟ ಮಾಡಿದ ಆಸ್ತಿಯ ಬಗ್ಗೆ ನಮ್ಮ ಹತ್ತಿರ ಯಾವುದೇ ದಾಖಲೆ ಇರುವುದಿಲ್ಲ. ಸದರಿ ದಾಖಲೆಗಳು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ

ಆಗುವುದಿಲ್ಲ. 2019 ಮತ್ತು 2002 ರಲ್ಲಿ ನಾವು ಮಾರಾಟ ಮಾಡಿದ ಆಸ್ತಿಗಳಿಂದ ಬಂದ ಹಣದ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಆಗುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಕೇ. ಹೇ. ಸರಿ ಇದೆ.

ಸಹಿ/-
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**